ಕ್ರ. ಸಂ.	ಅಭ್ಯರ್ಥಿಯ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1.	ನೇತ್ರಾ ಎಸ್.	116242	11.02.1980	ಸಾ.ವ	ಎಂ.ಎಸ್‌ಸಿ (ಪ್ರಾಣಿಶಾಸ್ತ್ರ) 76.95%
2.	ಗಂಗೋತ್ರಿ ಈಶ್ವರ್ ಚಿಮ್ಮನ್‌ಚೂಡ್	075491	08.06.1985	ಪ.ಜಾ.	ಎಂ.ಎಸ್‌ಸಿ (ಪ್ರಾಣಿಶಾಸ್ತ್ರ) 70.87
3.	ಪರಶುರಾಮ ನಾಯಕ್ ಎಂ.ಪಿ.	100446	08.12.1969	ಪ.ಪಂ	ಎಂ.ಎಸ್‌ಸಿ (ಪ್ರಾಣಿಶಾಸ್ತ್ರ) 47.25%

ಹೆಚ್ಚುವರಿ ಪಟ್ಟಿ

ಕ್ರ. ಸಂ.	ಅಭ್ಯರ್ಥಿಯ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1.	ಭಾರತಿ ಕೊಡ್ನಾಪುರ್	64163	31.07.1985	ಸಾ.ವ	ಎಂ.ಎಸ್‌ಸಿ (ಪ್ರಾಣಿಶಾಸ್ತ್ರ) 73.04%
2.	ಕೃಷ್ಣರಾಮ್ ಹೆಚ್.	105341	20.07.1976	ಪ.ಜಾ.	ಎಂ.ಎಸ್‌ಸಿ (ಪ್ರಾಣಿಶಾಸ್ತ್ರ) 69.00

* ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

ಈ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:–

1. ಈ ಆಯ್ಕೆಪಟ್ಟಿಯಲ್ಲಿ ಹುದ್ದೆಗಳನ್ನು ಸೇರಿಸಿರುವ ಕಾರಣದಿಂದಾಗಿ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಮುಖ್ಯಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಯಾವುದೇ ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಅದೇ ಮೀಸಲಾತಿಯಡಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಸ್ಥಾನ ಹೊಂದಿರುವ ಅಭ್ಯರ್ಥಿಯನ್ನು ನೇಮಕಾತಿಗೆ ಪರಿಗಣಿಸುವ ಸಲುವಾಗಿ ಮಾತ್ರ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಹೆಚ್ಚುವರಿ ಪಟ್ಟಿಯಲ್ಲಿ ಸ್ಥಾನಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
3. ಅಭ್ಯರ್ಥಿಗಳ ಆಯ್ಕೆಯು ನ್ಯಾಯಾಲಯದಲ್ಲಿ ಹೂಡಲಾಗಿರುವ / ಹೂಡಲಾಗುವ ಪ್ರಕರಣಗಳಲ್ಲಿನ ತೀರ್ಪಿನನ್ವಯ ಪುನರ್‌ವಿಲೋಕನೆಗೆ ಒಳಪಡಿಸುವ ಹಾಗೂ ಅನರ್ಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.
4. ಮೀಸಲಾತಿಯಡಿಯಲ್ಲಿ ಆಯ್ಕೆಗಾಗಿ ಪರಿಗಣಿಸಲಾಗಿರುವ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿ ಯಾವುದೇ ಪ್ರಮಾಣ ಪತ್ರ ನಮೂದಿಸಿದ ಅಂಶಗಳು ವ್ಯತಿರಿಕ್ತವಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಪುನರ್ ಪರಿಶೀಲಿಸಿ, ಆಯ್ಕೆಯನ್ನು ರದ್ದುಗೊಳಿಸಲಾಗುವುದು.
5. ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿಶೀಲನೆಗೆ ಒಳಪಡಿಸಲಾಗುವುದು. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ, ರದ್ದುಗೊಳಿಸಲಾಗುವುದು.
6. ಅಂತಿಮ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಯು ಜಾತಿ/ಆದಾಯ/ಸಿಂಧುತ್ವ ಪ್ರಮಾಣ ಪತ್ರಗಳು/ವೈದ್ಯಕೀಯ ಪರಿಶೀಲನಾ ವರದಿಗಳು/ಆರಕ್ಷಕ ವಿಚಾರಣಾ ವರದಿಗಳ ಸ್ವೀಕೃತಿ / ಪರಿಶೀಲನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಎಲ್ಲಾ ಅಗತ್ಯ ವರದಿಗಳು ಸ್ವೀಕೃತವಾಗಿ ಅಂಗೀಕೃತವಾಗದೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿ
ವಿಶೇಷ ನೇಮಕಾತಿ ಸಮಿತಿ ಹಾಗೂ
ಮುಖ್ಯ ಆಡಳಿತಾಧಿಕಾರಿಗಳು, ಆಕುಕ ಸೇವೆಗಳು.

ಪಿ.ಆರ್. 292

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001

ಅಧಿಸೂಚನೆ

ಸಂಖ್ಯೆ: ಆರ್(3) 06/2010–11/ಪಿಎಸ್‌ಸಿ, ದಿನಾಂಕ: 29ನೇ ಏಪ್ರಿಲ್ 2010

ವಿಷಯ: ಕೆ.ಎ.ಟಿ. ಅರ್ಜಿ ಸಂಖ್ಯೆ: 1335/04ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯ ಮಂಡಳಿಯ ದಿ: 26.02.2010ರ ಆದೇಶದನ್ವಯ ಶೀಘ್ರಲಿಪಿಗಾರರ ಹುದ್ದೆಗೆ ಶ್ರೀ ಮಹಮ್ಮದ್ ರಫಿ ಖಾಜಿ, ಇವರನ್ನು ಪ್ರ–2ಬಿ ಮೀಸಲಾತಿಯಡಿ ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ: 1) ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: ಶೀಬೆಪ್ರಾ 01 ಪ್ರಕಟ 98, ದಿ:10.09.98

2) ದಿ: 26.02.10ರ ಮಾನ್ಯ ಕೆ.ಎ.ಟಿ. ಆದೇಶ

ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರವು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಸದರಿ ಹುದ್ದೆಗಳ ನೇಮಕಾತಿಗೆ ಅರ್ಜಿದಾರರಾದ ಶ್ರೀ ಮಹಮ್ಮದ್ ರಫಿ ಖಾಜಿ, ಇವರು ತಮ್ಮನ್ನು ಆಯ್ಕೆ ಮಾಡದಿರುವ ಬಗ್ಗೆ ಪ್ರಶ್ನಿಸಿ ಕೆ.ಎ.ಟಿ. ಅರ್ಜಿ ಸಂಖ್ಯೆ: 1335/04ರಲ್ಲಿ ದಾವೆ ಹೂಡಿದ್ದರ ಮೇರೆಗೆ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿ: 26.02.10ರ ಆದೇಶದಲ್ಲಿ, ಶ್ರೀ ಮಹಮ್ಮದ್ ರಫಿ ಖಾಜಿ, ಇವರನ್ನು ಎರಡು ತಿಂಗಳೊಳಗಾಗಿ ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆ ಮಾಡಿ ನೇಮಿಸಲು ಆಯೋಗಕ್ಕೆ ನಿರ್ದೇಶಿಸಿರುತ್ತಾರೆ. ನ್ಯಾಯಾಲಯದ ಆದೇಶದಂತೆ ಸದರಿ ಅಭ್ಯರ್ಥಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆ ಮಾಡಿ, ಹಂಚಿಕೆ ಮಾಡಿದೆ.

ಕ್ರ. ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಲಿಂಗ	ಜನ್ಮ ದಿನಾಂಕ	ಮೀಸಲಾತಿ	ಒಟ್ಟು ಅಂಕಗಳು
1.	ಶ್ರೀ ಮಹಮ್ಮದ್ ರಫಿ ಖಾಜಿ ಬಿನ್ ಅಬ್ದುಲ್ ಗಣಿ ಖಾಜಿ, ಜಾಡರ್ ಓಣಿ, ಜುಲೈ ಗಲ್ಲಿ, ಹನುಮಾನ ಮಂದಿರ ಹಿಂದೆ, ಬಿಜಾಪುರ–586104.	ಪುರುಷ	06.11.74	2ಬಿ	197.99

ವಿ.ಬಿ. ಪಾಟೀಲ್

ಪಿ.ಆರ್. 294

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ

ಕೃಷಿ ಇಲಾಖೆ

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಬೆಂಗಳೂರು ಉತ್ತರ ತಾಲ್ಲೂಕು, ಯಶೋಧನಗರ, ಜಕ್ಕೂರು ವಿಮಾನ ನಿಲ್ದಾಣ ಎದುರು, ಬೆಂಗಳೂರು–64

ಮರುಟೆಂಡರ್–ಯಾ–ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ: ಸಕೃನಿ ಬೆಂಉ./ಲೆಕ್ಕ–2/ವಾಹನಹರಾಜು/09–10, ದಿನಾಂಕ: 29ನೇ ಏಪ್ರಿಲ್ 2010

ವಿಷಯ: ಸಹಾಯಕ ಕೃಷಿ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು ರವರ ವಾಹನ ಸಂಖ್ಯೆ:ಸಿ.ಕೆ.ಜಿ.926 ಜೀಪ್ ಅನುಪಯುಕ್ತವಾಗಿರುವ ಪ್ರಯುಕ್ತ ಮರುಟೆಂಡರ್–ಯಾ–ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1. ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರ ಜಿಲ್ಲಾ ಸಮಿತಿ ನಡವಳಿಗಳ ಸಂ:ಎ.ಡಿ.ಎಂ(1)ನ ಆರ್.38/07–08/1

2. ಮಾನ್ಯ ಜ.ಕೃ.ನಿ. ಬೆಂ.ನಗರ ಜಿಲ್ಲೆ, ರವರ ಹಿಂಬರಹ ಪತ್ರ ಸಂಖ್ಯೆ:ಜಂ.ಕೃ.ನಿ:ಬೆಂ.ನ:ವಾಹನ ವಿಲೇವಾರಿ/ಸಿ.ಕೆ.ಜಿ–926/ಹರಾಜು/09–10 ದಿ:15.02.2010 ಮತ್ತು ದಿನಾಂಕ: 26.04.2010ರ ಪತ್ರಗಳು.

3. ಈ ಕಛೇರಿಯ ಇದೇ ಕ್ರಮಾಂಕದ ದಿನಾಂಕ: 22.2.2010ರ ಪ್ರಕಟಣೆ

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕಛೇರಿ ವಾಹನ (ಜೀಪು) ಸಂಖ್ಯೆ ಸಿ.ಕೆ.ಜಿ:926 ಅನುಪಯುಕ್ತವಾಗಿದ್ದು, ದಿ:28.06.2010 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿವುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ವಾಹನ ನೊಂದಣಿ ಸಂಖ್ಯೆ	ಮಾದರಿ	ಹರಾಜು ದಿನಾಂಕ	ವಾಹನ ನಿಲ್ಲಿಸಿದ ಸ್ಥಳ ಹಾಗೂ ಹರಾಜು ಮಾಡುವ ಸ್ಥಳ	ಹರಾಜು ಮಾಡುವ ಅಧಿಕಾರಿಯ ಪದನಾಮ
1.	ಸಿ.ಕೆ.ಜಿ.–926	1988	28.6.2010	ಕೃಷಿ ಆಯುಕ್ತರ ಕಛೇರಿ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು–1	ಸಹಾಯಕ ಕೃಷಿ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು

ಇಷ್ಟವುಳ್ಳ ಬಿಡ್ಡುದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಹಿರಂಗ ಹರಾಜಿನಲ್ಲಿ ಪಾಲ್ಗೊಳ್ಳಬಹುದಾಗಿರುತ್ತದೆ.

ಸಹಾಯಕ ಕೃಷಿ ನಿರ್ದೇಶಕರು

ಪಿ.ಆರ್. 295 ಬೆಂಗಳೂರು ಉತ್ತರ ತಾಲ್ಲೂಕು, ಯಶೋಧನಗರ, ಬೆಂಗಳೂರು–64

ಪೊಲೀಸ್ ಮಹಾ ನಿರ್ದೇಶಕರು

ಸಿಐಡಿ, ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು

ಅಧಿಸೂಚನೆ

ಸಂ:24/ಎಂಟಿ/ಸಿಐಡಿ/2009–10, ಬೆಂಗಳೂರು, ದಿನಾಂಕ: ಏಪ್ರಿಲ್ 2010

ವಿಷಯ: ಸಿಐಡಿ ಘಟಕದ ಆವರಣದಲ್ಲಿರುವ ಹಳೆಯ ವಾಹನ ಮತ್ತು ವಸ್ತುಗಳನ್ನು ಬಹಿರಂಗವಾಗಿ ಹರಾಜು ಮಾಡುವ ಬಗ್ಗೆ.

ಸಿಐಡಿ ಘಟಕದ ಕಛೇರಿಯ ಆವರಣದಲ್ಲಿ ತುಂಬಾ ಹಳೆಯದಾದ/ತುಕ್ಕು ಹಿಡಿದ/ಉಪಯೋಗಕ್ಕೆ ಬಾರದ ನಾಲ್ಕು ಚಕ್ರ ವಾಹನಗಳು, ದ್ವಿಚಕ್ರ ವಾಹನ, ಹಳೆಯ ಸೈಕಲ್‌ಗಳು, ಕೆಲವು ಮರದ ಕೊಂಬೆಗಳು ಹಾಗೂ ಇತರೆ ವಸ್ತುಗಳನ್ನು ಶೇಖರಿಸಿದ್ದು ಇವುಗಳನ್ನು ಹರಾಜು ಮೂಲಕ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಸಿಐಡಿ, ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560 001 ಕಛೇರಿಯ ಆವರಣದಲ್ಲಿ ದಿ: 21.05.2010 ರಂದು ಬೆಳಿಗ್ಗೆ 11.00 ಗಂಟೆಗೆ ಬಹಿರಂಗ ಹರಾಜು (ಮಾರಾಟ) ಮಾಡಲಾಗುವುದು.

ಇವುಗಳನ್ನು ಹರಾಜಿನಲ್ಲಿ ಕೊಳ್ಳಲು ಇಚ್ಛೆಯುಳ್ಳ ಸಾರ್ವಜನಿಕ ಬಿಡ್‌ದಾರರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದಾಗಿದೆ.

ಹರಾಜು ಮಾಡಲಿರುವ ವಾಹನಗಳ ಮತ್ತು ವಸ್ತುಗಳ ಮಾಹಿತಿಯನ್ನು ಸಿಐಡಿ ಘಟಕದ ವಾಹನ ಸಾರಿಗೆ ಆವರಣದಲ್ಲಿ ವೀಕ್ಷಿಸಬಹುದಾಗಿದೆ. ವಿವರಗಳು ಈ ಕೆಳಕಂಡಂತಿವೆ.

1. ಮಣ್ಣಿನಲ್ಲಿ ಚಕ್ರ ಊತಿಕೊಂಡಿರುವ 2 ಹಳೆಯ ಅಂಬಾಸಿಡರ್ ಕಾರು, ಅದರಲ್ಲಿ ಅರ್ಧ ಇಂಜಿನ್ ಇರುವುದಿಲ್ಲ.
2. ಒಂದು ಅಂಬಾಸಿಡರ್ ಕಾರಿನಲ್ಲಿ ಇಂಜಿನ್ ಮತ್ತು ಚಕ್ರಗಳು ಇರುವುದಿಲ್ಲ. ಕೇವಲ ತುಕ್ಕು ಹಿಡಿದ ಹೊರ ಕವಚ ಮಾತ್ರ ಉಳಿದಿರುತ್ತದೆ.
3. ಒಂದು ತುಕ್ಕು ಹಿಡಿದ ಮಿನಿ ಟೆಂಪೋ ವಾಹನ.
4. ತುಕ್ಕು ಹಿಡಿದ ಕೆಲವು ಸೈಕಲ್‌ಗಳು
5. ಒಂದು ತುಕ್ಕು ಹಿಡಿದ ಮೋಟಾರ್ ಸೈಕಲ್‌ನ ಹೊರ ಕವಚ
6. ಕೆಲವು ಮರದ ತೊಲೆಗಳು ಹಾಗೂ ಇತರೆ ವಾಹನದ ಬಿಡಿ ಭಾಗಗಳು.

ಪೊಲೀಸ್ ಮಹಾ ನಿರ್ದೇಶಕರು

ಪಿ.ಆರ್. 299 ಸಿಐಡಿ, ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,

ಬೆಂಗಳೂರು ರವರ ಪರವಾಗಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಟೆಂಡರ್ ಅಧಿಸೂಚನೆ

ಸಂಖ್ಯೆ: ಸಿಆಸುಇ 116 ಡಿಇವಿ 2010, ಬೆಂಗಳೂರು, ದಿನಾಂಕ: 23ನೇ ಏಪ್ರಿಲ್ 2010

1) ಕರ್ನಾಟಕ ಸರ್ಕಾರ ಸಚಿವಾಲಯದ ಬಹು ಮಹಡಿ ಕಟ್ಟಡ ಸಂಕೀರ್ಣದ ಆವರಣದಲ್ಲಿ ಸ್ಕೂಟರ್ ಮತ್ತು ಕಾರ್ ಸ್ಟ್ಯಾಂಡನ್ನು ಗುತ್ತಿಗೆ ಆಧಾರದ ಮೇಲೆ ನಡೆಸಲು ಅನುಭವಸ್ಥ ಗುತ್ತಿಗೆದಾರರಿಂದ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಕರೆಯಲಾಗಿದೆ.

2) ಟೆಂಡರ್ ಕವರಿನ ಮೇಲೆ "ಕರ್ನಾಟಕ ಸರ್ಕಾರ ಸಚಿವಾಲಯದ ಬಹುಮಹಡಿ ಕಟ್ಟಡದ ಸ್ಕೂಟರ್ ಹಾಗೂ ಕಾರ್ ಸ್ಟ್ಯಾಂಡಿನ ಗುತ್ತಿಗೆ ಬಗ್ಗೆ" ಎಂದು ಬರೆದಿರತಕ್ಕದ್ದು ಹಾಗೂ ರೂ.10,000–00 ಇ.ಎಂ.ಡಿ. ಮೊತ್ತಕ್ಕೆ ಡಿಮ್ಯಾಂಡ್ ಡ್ರಾಫ್ಟನ್ನು "ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ)", ಇವರ ಹೆಸರಿಗೆ ಬರೆದು, "ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ವಿಧಾನಸೌಧ,

ಬೆಂಗಳೂರು" ಇವರಿಗೆ ಸಂಬೋಧಿಸಿ ಕಳುಹಿಸತಕ್ಕದ್ದು. ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಿರದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.05.2010ರ ಮಧ್ಯಾಹ್ನ 3.00 ಗಂಟೆಯವರೆಗೆ

4) ಟೆಂಡರ್‌ನ್ನು ದಿನಾಂಕ: 25.05.2010 ರ ಮಧ್ಯಾಹ್ನ 3.30 ಗಂಟೆಗೆ ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ) ಕೊಠಡಿ ಸಂಖ್ಯೆ 23, ವಿಧಾನಸೌಧ, ಬೆಂಗಳೂರು ಇವರ ಕೊಠಡಿಯಲ್ಲಿ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕವು ಯಾವುದಾದರೂ ಸಾರ್ವತ್ರಿಕ ರಜಾ ದಿನವಾಗಿದ್ದಲ್ಲಿ ನಂತರದ ಕೆಲಸದ ದಿನದಂದು ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.

5) ಟೆಂಡರ್ ಸಲ್ಲಿಸುವವರು ಒಂದು ವರ್ಷದ ಹಣವನ್ನು ನಮೂದಿಸತಕ್ಕದ್ದು ಮತ್ತು ಈ ಮೊತ್ತವು ರೂ.1,00,000/– ಕ್ಕಿಂತ (ರೂಪಾಯಿ ಒಂದು ಲಕ್ಷ ಮಾತ್ರ) ಕಡಿಮೆ ಇರಕೂಡದು.

6) ಯಶಸ್ವಿ ಟೆಂಡರ್‌ದಾರರು ಸೂಚಿಸಲಾಗುವ ಒಂದು ವರ್ಷದ ಟೆಂಡರ್ ಹಣವನ್ನು ಒಂದೇ ಕಂತಿನಲ್ಲಿ ಸರ್ಕಾರಕ್ಕೆ ಪಾವತಿ ಮಾಡತಕ್ಕದ್ದು. ಟೆಂಡರ್ ಹಣವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ "0070–ಇತರ ಆಡಳಿತಾತ್ಮಕ ಸೇವೆಗಳು–ಸಿ–60–ಇತರ ಸೇವೆಗಳು–800–ಇತರೆ ಸ್ವೀಕೃತಿಗಳು–03–ಸಾಮಾನ್ಯ ಆಡಳಿತ ಸ್ವೀಕೃತಿಗಳು" ಗೆ ಪಾವತಿ ಮಾಡತಕ್ಕದ್ದು.

7) ಯಶಸ್ವಿ ಟೆಂಡರ್‌ದಾರರು ಪಾವತಿ ಮಾಡಿರುವ ಇ.ಎಂ.ಡಿ. ಮೊತ್ತವನ್ನು ಗುತ್ತಿಗೆ ಷರತ್ತುಗಳನ್ನು ನಿಭಾಯಿಸುವ ಸಲುವಾಗಿ ಸೆಕ್ಯೂರಿಟಿ ಡಿಪಾಸಿಟ್ ಆಗಿ ಪರಿಗಣಿಸಲಾಗುವುದು. ಅಯಶಸ್ವಿ ಟೆಂಡರ್‌ದಾರರ ಮುಂಗಡ ಹಣ ಮೊತ್ತವನ್ನು ಅವರು ಕೋರಿಕೆ ಸಲ್ಲಿಸಿದ ನಂತರ ಮರು ಪಾವತಿ ಮಾಡಲಾಗುವುದು.

8) ಯಾವುದಾದರೊಂದು ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸಲು ಅಥವಾ ಒಪ್ಪಿಕೊಳ್ಳಲು ಸರ್ಕಾರವು ಪೂರ್ಣ ಹಕ್ಕನ್ನು ಹೊಂದಿರುತ್ತದೆ.

9) ಈ ಗುತ್ತಿಗೆಯು ಈ ಕೆಳಗೆ ಕಾಣಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:–

1) ಈ ಗುತ್ತಿಗೆಯು ದಿನಾಂಕ: 01.07.2010 ರಿಂದ 30.06.2011ರ ಒಂದು ವರ್ಷದ ಅವಧಿಗೆ ಇರುತ್ತದೆ.

2) ಗುತ್ತಿಗೆದಾರರು, ಸ್ಕೂಟರ್ ಮತ್ತು ಕಾರ್ ಸ್ಟ್ಯಾಂಡ್‌ನ್ನು ಬೆಳಿಗ್ಗೆ 8–00 ಗಂಟೆಯಿಂದ ರಾತ್ರಿ 8–00 ಗಂಟೆಯವರೆಗೆ ಎಲ್ಲಾ ಕಚೇರಿಯ ಕರ್ತವ್ಯದ ದಿನಗಳಲ್ಲಿ ನಡೆಸತಕ್ಕದ್ದು. ಮತ್ತು ಸ್ಕೂಟರ್ ಮತ್ತು ಕಾರ್ ಸ್ಟ್ಯಾಂಡ್‌ನ ಆವರಣವನ್ನು ಗುತ್ತಿಗೆದಾರರು ಸ್ವಚ್ಛವಾಗಿ ಇಡತಕ್ಕದ್ದು.

3) ಸರ್ಕಾರಿ ನೌಕರರಿಂದ ಸೈಕಲ್ ಒಂದಕ್ಕೆ ತಿಂಗಳೊಂದಕ್ಕೆ ರೂ.5–00 ಹಾಗೂ ಮೋಟಾರ್ ಸೈಕಲ್, ಸ್ಕೂಟರ್, ಮೊಪೆಡ್‌ಗಳಿಗೆ ತಿಂಗಳೊಂದಕ್ಕೆ ರೂ.10–00 ರಂತೆ ಮತ್ತು ಕಾರುಗಳಿಗೆ ತಿಂಗಳೊಂದಕ್ಕೆ ರೂ. 25–00ರಂತೆ ಶುಲ್ಕವನ್ನು ಗುತ್ತಿಗೆದಾರರು ವಸೂಲಿ ಮಾಡುವುದು. ಇತರರಿಂದ ಒಂದು ದಿನಕ್ಕೆ ಸೈಕಲ್‌ಗೆ ರೂ.1–00 ರಂತೆ ಮೋಟಾರ್ ಸೈಕಲ್, ಸ್ಕೂಟರ್, ಮೊಪೆಡ್‌ಗಳಿಗೆ ರೂ.3–00 ರಂತೆ ಮತ್ತು ಕಾರುಗಳಿಗೆ ರೂ.5–00 ರಂತೆ ಶುಲ್ಕವನ್ನು ಪಡೆದುಕೊಳ್ಳತಕ್ಕದ್ದು.

4) ಈ ನಿಲ್ದಾಣದಲ್ಲಿ ನಿಲ್ಲಿಸಿರುವ ವಾಹನಗಳಿಗೆ ಗುತ್ತಿಗೆದಾರರು ಟೋಕನ್‌ಗಳನ್ನು ನೀಡತಕ್ಕದ್ದು.

5) ಈ ನಿಲ್ದಾಣದಲ್ಲಿ ನಿಲ್ಲಿಸಿರುವ ವಾಹನಗಳಿಗೆ ಮೇಲ್ಕಾಣಿಸಿದಂತೆ ನಿಗದಿತ ಶುಲ್ಕವನ್ನು ಮಾತ್ರ ವಸೂಲಿ ಮಾಡತಕ್ಕದ್ದು.

6) ಸರ್ಕಾರಿ ಕಛೇರಿಗಳ ಸೈಕಲ್ : ಸ್ಕೂಟರ್ : ಕಾರು ಚಾಲಕರುಗಳಿಂದ ಗುತ್ತಿಗೆದಾರರು ಶುಲ್ಕವನ್ನು ವಸೂಲಿ ಮಾಡಕೂಡದು.

7) ಈ ನಿಲ್ದಾಣಗಳಲ್ಲಿ ನಿಗದಿತ ವೇಳೆಯಲ್ಲಿ ನಿಲ್ಲಿಸಿರುವ ವಾಹನಗಳ ಭದ್ರತೆಯ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ. ಈ ಸ್ಟ್ಯಾಂಡಿನಲ್ಲಿ ವಾಹನಗಳನ್ನು ನಿಲ್ಲಿಸಿದ ಅವಧಿಯಲ್ಲಿ ವಾಹನಗಳಿಗೆ ಯಾವುದೇ ನಷ್ಟ ಅಥವಾ ಹಾನಿ ಉಂಟಾದಲ್ಲಿ ಗುತ್ತಿಗೆದಾರರು ಇದಕ್ಕೆ ಪರಿಹಾರವನ್ನು ನೀಡಲು ಜವಾಬ್ದಾರರಾಗಿರುತ್ತಾರೆ.

8) ಈ ನಿಲ್ದಾಣದಲ್ಲಿ ನಿಗದಿತ ವೇಳೆಯಲ್ಲಿ ನಿಲ್ಲಿಸಿರುವ ಯಾವುದೇ ವಾಹನವು ಕಾಣೆಯಾದಲ್ಲಿ ಅಥವಾ ಅದಕ್ಕೆ ಹಾನಿಯಾದಲ್ಲಿ ಇದು ಗುತ್ತಿಗೆದಾರರ ನಿರ್ಲಕ್ಷ್ಯತನ ಅಥವಾ ಉಪೇಕ್ಷೆಯಿಂದ ಆಗಿದ್ದಲ್ಲಿ ಗುತ್ತಿಗೆದಾರರೇ ವಾಹನದ ಮಾಲೀಕರಿಗೆ ಪರಿಹಾರ ಕೊಡುವ ವಿಷಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕೊಡುವ ನಿರ್ಣಯವು ಅಂತಿಮವಾಗಿರುತ್ತದೆ. ಗುತ್ತಿಗೆ ಅವಧಿ ಮುಗಿದ ಮೇಲೆ ಗುತ್ತಿಗೆದಾರರಿಂದ ಸರ್ಕಾರಕ್ಕಾಗಲೀ ಅಥವಾ ವಾಹನದ ಮಾಲೀಕರಿಗಾಗಲೀ ಯಾವುದೇ ಬಾಕಿ ಇದ್ದಲ್ಲಿ ಅದನ್ನು ಮುಂಗಡ ಹಣದಿಂದ ಕಳೆದು ಬಾಕಿ ಹಣವನ್ನು ಗುತ್ತಿಗೆದಾರರಿಗೆ ಹಿಂತಿರುಗಿಸಲಾಗುವುದು.

9) ಗುತ್ತಿಗೆಯನ್ನು ಒಪ್ಪಿದ ದಿನಾಂಕದಿಂದ 15 ದಿವಸದೊಳಗೆ ಗುತ್ತಿಗೆದಾರರು ನಿಗದಿತ ಪ್ರಪತ್ರದಲ್ಲಿ ಕರಾರನ್ನು ಸಹಿ ಮಾಡಿ ಕೊಡತಕ್ಕದ್ದು.

10) ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳ ಉಲ್ಲಂಘನೆಯಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು. ಅಂತಹ ಸಂದರ್ಭದಲ್ಲಿ ಭದ್ರತಾ ಠೇವಣಿಯಾಗಿ ಇಟ್ಟಿರುವ ಮುಂಗಡ ಹಣವನ್ನು ಹಾಗೂ ಮುಂಗಡವಾಗಿ ಪಾವತಿ ಮಾಡಿರುವ ಗುತ್ತಿಗೆ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

11) ಗುತ್ತಿಗೆದಾರರು, ಗುತ್ತಿಗೆ ನಡೆಸುವ ಸ್ಥಳಗಳಲ್ಲಿ ಸರ್ಕಾರಿ ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ನಿಗದಿಪಡಿಸಿರುವ ಶುಲ್ಕವನ್ನು ಬೋರ್ಡ್‌ನಲ್ಲಿ ಬರೆದು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

12) ಈ ಸಂಬಂಧ ಯಾವುದೇ ವ್ಯಾಜ್ಯ ಉಂಟಾದಲ್ಲಿ ಅದನ್ನು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸಿಕೊಳ್ಳತಕ್ಕದ್ದು.

10) ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸುವುದನ್ನು ಹೊರತುಪಡಿಸಿ ಬೇರೆ ಯಾವುದೇ ಕಾರಣಗಳಿಗಾಗಿ ಯಾವುದೇ ಸಮಯದಲ್ಲಿ, ಗುತ್ತಿಗೆದಾರರಿಗೆ 2 ತಿಂಗಳ ಸೂಚನಾ ಪತ್ರ ನೀಡಿ ಗುತ್ತಿಗೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಹಕ್ಕಿರುತ್ತದೆ. ಈ ಉಪ ವಾಕ್ಯದಂತೆ ಗುತ್ತಿಗೆಯನ್ನು ರದ್ದುಪಡಿಸಿದಲ್ಲಿ ಉಳಿದ ಗುತ್ತಿಗೆ ಅವಧಿಗೆ ಸಮ ಪ್ರಮಾಣದ ಗುತ್ತಿಗೆ ಶುಲ್ಕವನ್ನು ಗುತ್ತಿಗೆದಾರರಿಗೆ ಹಿಂದಿರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಎಸ್. ಮಂಜುನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಪಿ.ಆರ್. 300

ಜಿಲ್ಲಾ ಪೊಲೀಸ್ ಕಾರ್ಯಾಲಯ, ಗದಗ ಜಿಲ್ಲೆ, ಗದಗ

ಬಹಿರಂಗ ಹರಾಜು ಪ್ರಕಟಣೆ

ಸಂ:ಎಂ.ಟಿ./326/2010, ಗದಗ, ದಿನಾಂಕ: 21ನೇ ಏಪ್ರಿಲ್ 2010

ವಿಷಯ: ಗದಗ ಜಿಲ್ಲೆಯ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದಲ್ಲಿರುವ ನಿರುಪಯುಕ್ತ ವಾಹನ ಸಂ. ಕೆಎ–25/ಜಿ–78 ನೇದ್ದನ್ನು ಖಾಲಿ ವಾಹನದ ತೂಕದ ಆಧಾರದ ಮೇರೆಗೆ ಟೆಂಡರ್ ಕಂ. ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂ:ಸಿಆಸುಇ/142/ಶಿವಾನಿ/2000, ದಿ:05.01.2001.
2. ಸರ್ಕಾರದ ಪತ್ರ ಸಂ.ಹೆಚ್‌ಡಿ/19/ಇಎಂವಿ/2009, ದಿ:12.05.09.
3. ಪ್ರಧಾನ ಕಚೇರಿ ಆದೇಶ ಸಂ.ವಾಸಾ(1)/18/08–09(ವಾಲ್ಯೂಂ–2), ದಿ:07.04.2010

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಜಿಲ್ಲೆಯ ನಿರುಪಯುಕ್ತ ಪೊಲೀಸ್ ಜೀಪ್ ಸಂ. ಕೆಎ–25/ಜಿ–78 ನೇದ್ದರ ನೊಂದಣಿಯನ್ನು ರದ್ದುಪಡಿಸಿ ಖಾಲಿ ವಾಹನದ ತೂಕದ ಆಧಾರದ ಮೇರೆಗೆ ಮಲ್ಲಸಮುದ್ರದಲ್ಲಿರುವ ಗದಗ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ದಿನಾಂಕ:09.06.2010 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಟೆಂಡರ್ ಕಂ. ಬಹಿರಂಗ ಹರಾಜು ಮಾಡಲಾಗುವುದು.

ಪೊಲೀಸ್ ಸೂಪರಿಂಟೆಂಡೆಂಟರು,
ಗದಗ ಜಿಲ್ಲೆ, ಗದಗ

ಪಿ.ಆರ್. 301

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಹಾಸನ – 573 201

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ

ಸಂಖ್ಯೆ:ಕಾಪಇಂ/ಸನೀವಿಹಾ/ಪಿಬಿ/ಇ–ಪ್ರಾಕ್ ಟೆಂಡರ್/2010–11

ವಿಷಯ: ಟೆಂಡರ್ ಮುಂದೂಡಿಕೆ ಪ್ರಕಟಣೆ ಬಗ್ಗೆ.

ಉಲ್ಲೇಖ: ಈ ಕಚೇರಿಯ ಇ–ಪ್ರಾಕ್ ಟೆಂಡರ್ ಪ್ರಕಟಣೆ ಸಂಖ್ಯೆ: 01/10–11, ದಿ: 07.04.2010.

ಉಲ್ಲೇಖಿತ ಪ್ರಕಟಣೆಯಲ್ಲಿ ಪ್ರಕಟವಾಗಿದ್ದ ಟೆಂಡರ್‌ನ ಪ್ರಕಟಣೆಯಲ್ಲಿನ ಕ್ರಮಸಂಖ್ಯೆ: 1 ರಿಂದ 9, 13, 16, 17 ನ್ನು ಈ ಕೆಳಗಿನಂತೆ ದಿನಾಂಕವನ್ನು ಮುಂದೂಡಿ ಪ್ರಕಟಿಸಲಾಗಿದೆ.

ಟೆಂಡರ್ ಪ್ರಕಟಣೆ ಯಲ್ಲಿರುವಂತೆ ಕ್ರಮಸಂಖ್ಯೆ	ಟೆಂಡರ್ ಬಗ್ಗೆ ವಿಚಾರಿಸುವ ಅವಧಿ	ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ಅಪ್‌ಲೋಡ್ ಮಾಡುವ ಅವಧಿ	ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ	ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ	ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ
1 ರಿಂದ 8 (ದ್ವಿ–ಲಕೋಟೆ)	22.5.2010ರ ಸಂಜೆ 5.00 ಗಂಟೆಯವರೆಗೆ	ದಿನಾಂಕ:24.05.2010 ರಿಂದ 28.05.2010ರ ಸಂಜೆ 4.00 ಗಂಟೆವರೆಗೆ	–	01.06.2010	07.06.2010

ಟೆಂಡರ್ ಪ್ರಕಟಣೆ ಯಲ್ಲಿರುವಂತೆ ಕ್ರಮಸಂಖ್ಯೆ	ಟೆಂಡರ್ ಬಗ್ಗೆ ವಿಚಾರಿಸುವ ಅವಧಿ	ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ಅಪ್‌ಲೋಡ್ ಮಾಡುವ ಅವಧಿ	ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ	ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ	ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ
9, 13, 16 ಮತ್ತು 17ರ (ಏಕ ಲಕೋಟೆ)	22.05.2010ರ ಸಂಜೆ 5.00 ಗಂಟೆಯವರೆಗೆ	ದಿನಾಂಕ:24.05.2010 ರಿಂದ 28.05.2010ರ ಸಂಜೆ 4.00 ಗಂಟೆವರೆಗೆ	31.05.2010	–	–

ಇನ್ನಿತರೇ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಹಾಸನ

WATER RESOURCES DEPARTMENT (Minor Irrigation)

Office of the Executive Engineer, M.I. Division, Hassan

NOTIFICATION FOR EXTENTION OF TENDER

Sub: Reg. extention of tender.

Ref: This office E-Proc tender notification No.01/10-11, Dated: 07.04.2010.

With reference to above tender notification the tender dates for the works under Sl.No. 1 to 9, 13, 16, 17 are postponed as given below:

Sl. No. as per Tender notification	Period for enquiry	Period uploading both Technical & Financial Bid	Date of Opening of both Technical & Financial Bid	Date of Opening of Technical Bid	Date of Opening of Financial Bid
1 to 8 (Two cover system)	22.05.2010 upto 5.00 PM	From 24.05.2010 to 28.05.2010 upto 4.00 PM	-	01.06.2010	07.06.2010
9, 13. 16 & 17 (One cover system)	22.05.2010 upto 5.00 PM	From 24.05.2010 to 28.05.2010 upto 4.00 PM	31.05.2010	-	-

There are no changes in other conditions.

P.R. 316 Executive Engineer, M.I. Division, Hassan

PROCEEDINGS OF THE KARNATAKA STATE BOARD OF WAKFS, BANGALORE-52

Sub: Change of Muthawalli for the management of Dargah Hazrath Syed Shah Kareemulla Sha Khadri, Yergera Road, Raichur District.

Preamble:

The Dargah Haz.Syed Shah Kareemulla Shah Quadri, Yergera Road, Raichur District is a registered Wakf institution vide Sl.No.161 of the Gazette notification dtd.4.5.1974 of Raichur.

Whereas a proposal is received from the Wakf Officer, DWAC, Raichur vide his letter No.DWAC/3/APM/RCR/2008-09/528 dtd.20.12.2008 for the change of Muthawalli for the management of Dargah Hazrath Syed Shah Kareemulla Sha Khadri, Yergera Road, Raichur district.

A Public Notice dtd. 10.06.2009 was issued for inviting objections / suggestions if any, from the locality on the said proposal.

Whereas the Wakf Officer, Dist. Wakf Advisory Committee, Raichur, while forwarding the Mahazar drawn on 1.8.2009 by the Wakf Inspector has requested this office to approve the change of Muthawalli since no objections or suggestions were received by this office.

And whereas the subject was placed before the Board in its 31st Board Meeting held on 24th October 2009 vide Agenda Sub.No.25 at Sl.No.3. The Board after careful consideration has accorded its approval for the change of Muthawalli under Section 42 of the Wakf Act, 1995 wherein the vacancy has arisen due to death of notified muthawalli. Hence this Order.

Order No. KBW/RCR/20/APM/2009-10, Dated: 25th November 2009

In exercise of the powers conferred Under Section 42 of the Wakf Act 1995 the Karnataka Board of Wakfs hereby confirms the change of Muthawalli for the management of Dargah Haz.Syed Shah Kareemulla Shah Quadri, Yergera Road, Raichur in favour of Sri SyedHaris Mohiuddin Quadri S/o Syed Shah Ghouse Mohiuddin Quadri as Muthawalli.

The Muthawalli shall function in accordance with the Wakf Act 1995 and Karnataka Wakf Rules 1997.

By Order of the Board

P.D. 63

Addl. Chief Executive Officer,

Karnataka State Board of Wakfs.

KARNATAKA STATE BOARD OF WAKFS

{Constituted by the Govt. of Karnataka under the Wakf Act, 1995 (Central Act-43 of 95)}

Darul Awkaf, # 6, Cunningham Road, Bangalore-52

Web:www.karwakf.org/E-mail:info@karwakf or

No. KBW/REG/18/BGM/07-08, Dated: 21st May 2008

CERTIFICATE OF REGISTRATION

It is hereby certify that the Wakf described hereunder is registered and brought on to the Register of Wakfs in accordance with section 36 of the Wakf Act, 1995.

Sl. No. of Kitabul Awkaf	Name, Class & Description of the Wakfs	Particulars of Wakf Properties	Name of the Muthawalli
685	Sunnath-e-Jamath Arfat Masjid & Khabrasthan Committee, Harugeri Village, Raibag Taluk, Belgaum District	**PROPERTIES** Sy.No.1, Arfat Masjid & Khabrasthan Harugeri Village, Raibag Taluk Area: 0A-25 Guntas Out of 19A.06 Guntas **Boundaries** East: Gokak Athani Road West: Karnataka Swa Mill (Sy.No.13) North: Small Road South: Small Road.	Managing Committee managed by its President

This certificate is issued under powers delegated vide order No. KBW/110/ADM/2005-06 dated 2.3.2006 of Karnataka State Board of Wakfs, Bangalore.

Addl. Chief Executive Officer,

P.D. 64

Karnataka State Board of Wakfs.

THE KARNATAKA BOARD OF WAKFS

19/4-A (Manick) Ist Main Road, Jayamahal Extension, Bangalore-46

No. KTW(REG) 3 BJR 86-87, Bangalore, Dated: 18th September 1986

CERTIFICATE OF REGISTRATION

It is hereby certified that the Wakf described hereunder is registered and brought on to the Registrar of Wakfs in accordance with Sections 27 & 28 of the Wakf Act, 1954 (29 of 1954)

Sl. No. of Kitabul Awkaf	Name, Class & Description of the Wakfs	Particulars of Wakf Properties	Name of the Muthawalli
43	Dargah Hazrath Gaibipeer, situated in CTS No. 1969 Ward No.V Near Railway Station, Bijapur	CTS No. 1969 Ward No.V **AREA** North-South-30' East-West-40' **BOUNDARIES** North-Road South-Openspace of Railway East-Railway open Space West- Openspace and thereafter Nalgi of Dalaprakash	1. Sri Rukmoddin s/o Nabisab Hattarkar Allapur Base, Bijapur. 2. Sri Aminsab s/o Nabisab Hattarkar Allapur Base, Bijapur

Secretary,
Karnataka Board of Wakfs

P.D. 65

FORM - I

(See Rule 9)

POLICE DEPARTMENT

Office of the Commandant IInd Bn K.S.R.P. Belgaum

NOTIFICATION

Sri **KALAGOUDA BHIMANAGOUDA TELAGINAMANI** Working as HEAD CONSTABLE Department of / Office of the COMMANDANT IIBN K.S.R.P. BELGAUM is permitted to change his name to **KALAGOUDA BHIMANAGOUDA PATIL**

COMMANDANT
IInd BN K.S.R.P. Belgaum

P.D. 50

FORM - I

(See Rule 9)

POLICE DEPARTMENT

Office of the Commandant IInd Bn K.S.R.P. Belgaum

NOTIFICATION

Sri **SURENDRA SATAYAPPA WALI** Working as HEAD CONSTABLE Department of / Office of the COMMANDANT IIBN K.S.R.P. BELGAUM is permitted to change his name to **SURESH SATAYAPPA WALI**

COMMANDANT
IInd BN K.S.R.P. Belgaum

P.D. 51

FORM - I

(See Rule 9)

POLICE DEPARTMENT

Office of the Commandant IInd Bn K.S.R.P. Belgaum

NOTIFICATION

Sri **NAGESH FAKKIRAPPA** Working as POLICE CONSTABLE Department of / Office of the COMMANDANT IIBN, K.S.R.P. BELGAUM is permitted to change his name to **NAGESH FAKKIRAPPA SIDDAPPANAVAR**

COMMANDANT

P.D. 52 IInd BN K.S.R.P. Belgaum

FORM - I

(See Rule 9)

POLICE DEPARTMENT

Office of the Commandant IInd Bn K.S.R.P. Belgaum

NOTIFICATION

Sri **HEMADRAYYA MARULASIDDAYYA BEVINAHAL** Working as POLICE CONSTABLE Department of / Office of the COMMANDANT IIBN K.S.R.P. BELGAUM is permitted to change his name to **HEMADRAYYA MARULASIDDAYYA BELAVINAHAL HIREMATH**

COMMANDANT

P.D. 53 IInd BN K.S.R.P. Belgaum

FORM - IV

(See Rule 12)

NOTICE

It is hereby notified that the undersigned has changed his/her name from **APPASAHEB MAHMADSAHEB MAKANDAR** to **ABBASALI MAHMADSAHEB JAMADAR**

P.D. 54 **APPASAHEB MAHMADSAHEB MAKANDAR**

FORM - I

(See Rule 9)

DEPUTY DIRECTOR OF PUBLIC INSTRUCTION BELGAUM

NOTIFICATION

Sri **MAHADEVAPPA YALLAPPA BHOVI** Working as Government Kannada Boys school Aladakatti in the Education Department of / Office of the Deputy Director of Public Instruction Dept., Belgaum is permitted to change his name to **JANARDHAN YALLAPPA SHIVAGIRI**

Signature and Designation of the

P.D. 55 Appointing Authority

FORM - IV

(See Rule 12)

NOTICE

It is hereby notified that the undersigned has changed his/her name from **YAMANAPPA TUKARAM NARGUNDKAR** to **T.N. HARSHAVARDHAN**

P.D. 56 **YAMANAPPA TUKARAM NARGUNDKAR**

ನಮೂನೆ–1

(9ನೇ ನಿಯಮ ನೋಡಿ)

ಪೊಲೀಸ್ ಇಲಾಖೆ

ಜಿಲ್ಲಾ ಪೊಲೀಸ್ ಕಾರ್ಯಾಲಯ, ಹಾವೇರಿ ಜಿಲ್ಲೆ

ಅಧಿಸೂಚನೆ

ಕುಮಾರಿ **ಕವಿತಾ ಚೌಡಪ್ಪ ಮಾದರ** ಮಪಿಸಿ 529 ಬ್ಯಾಡಗಿ ಪೊಲೀಸ್ ಠಾಣೆರವರಿಗೆ ಅವರ ಹೆಸರನ್ನು **ಕವಿತಾ ಚೌಡಪ್ಪ ದೊಡ್ಡಮನಿ** ಎಂದು ಬದಲಾಯಿಸಲು ಅನುಮತಿ ನೀಡಲಾಗಿದೆ.

ಪಿ.ಡಿ. 57 ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ

ನಮೂನೆ–1

(9ನೇ ನಿಯಮ ನೋಡಿ)

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಾನವಿ, ಜಿ:ರಾಯಚೂರು

ಅಧಿಸೂಚನೆ

ಶ್ರೀಮತಿ **ಪರ್ವೀನ್‌ಬಾನು ಅಬ್ದುಲ್ ರಹೆಮಾನ ಹನುಮನಾಳ** ಇವರು ಪ್ರಾಥಮಿಕ ಸಹ ಶಿಕ್ಷಕಿಯಾಗಿ (GHPS, ನೀರ ಮಾನವಿ ಕ್ರಾಸ್, ರೇಣುಕಾ ಬಡಾವಣೆ, ಮಾನವಿ) ಮಾನ್ವಿ ತಾಲ್ಲೂಕ ರಾಯಚೂರು ಜಿಲ್ಲೆ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು ಸೀ**ಮಾ ಸುಭಾಷ ಮಾಸಗೋನೆ** ಎಂದು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಪಿ.ಡಿ. 58 ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಾನವಿ ಜಿ। ರಾಯಚೂರು

ನಮೂನೆ–1

(9ನೇ ನಿಯಮ ನೋಡಿ)

ಶಿಕ್ಷಣ ಇಲಾಖೆ

ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ

ಅಧಿಸೂಚನೆ

ಶ್ರೀ **ಎಂ.ಎಂ. ಹೊಲೇರ** ಸಹ ಶಿಕ್ಷಕರು ಇವರು ಸ.ಹಿ. ಪ್ರಾ ಶಾಲೆ ಮಾಡಲಗೇರಿ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಗುಡಿಮನಿ ಎಂ.ಎಂ.** ಎಂದು ಬದಲಾಯಿಸಿ ಕೊಳ್ಳಲು ಅನುಮತಿ ನೀಡಲಾಗಿದೆ.

ಉಪ ನಿರ್ದೇಶಕರು

ಪಿ.ಡಿ. 59 ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ

ತಾಂತ್ರಿಕ ಶಿಕ್ಷಣ ಇಲಾಖೆ

ಪ್ರಾಚಾರ್ಯರವರ ಕಾರ್ಯಾಲಯ, ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ

ಟೆಂಡರು ಪ್ರಕಟಣೆ

ನಂ:ವಿಸಪಾಭ/142/ರಿ/2004–05, ದಿನಾಂಕ: 30ನೇ ಏಪ್ರಿಲ್ 2010

ವಿಷಯ: ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿರುವ ತೆಂಗಿನ ಮರದ ಬಲಿತ ಕಾಯಿಗಳನ್ನು ಟೆಂಡರ್ ಮೂಲಕ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ.

ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿರುವ 50 ತೆಂಗಿನ ಮರಗಳಿಂದ ಬಲಿತ ತೆಂಗಿನ ಕಾಯಿಗಳನ್ನು ಕೊಯ್ದು ಕೊಳ್ಳಲು ಮತ್ತು ತೆಂಗಿನ ಗರಿ ಇತ್ಯಾದಿಗಳನ್ನು ಒಯ್ಯಲು ಎರಡು ವರ್ಷಗಳವರೆಗೆ ಪಡೆಯಲು ಮೊಹರಾದ ಟೆಂಡರ್ ದರವನ್ನು ದಿನಾಂಕ: 15.06.10ರ ಒಳಗೆ ಮಧ್ಯಾಹ್ನ 4.00 ಗಂಟೆಯ ಒಳಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಸಲ್ಲಿಸಲು ತಿಳಿಸಲಾಗಿದೆ.

1) ಟೆಂಡರ್‌ನಲ್ಲಿ ಭಾಗವಹಿಸುವವರು ರೂ 500–00 ಪ್ರಾರಂಭಿಕ ಠೇವಣಿ ಹಣ ನೀಡಬೇಕು. ಈ ಹಣ ಟೆಂಡರ್ ಮುಗಿದ ನಂತರ ಹಿಂದಿರುಗಿಸಲಾಗುವುದು.
2) ಟೆಂಡರ್ ಮೊತ್ತ ನಿಗದಿತ ಮೊತ್ತಕ್ಕಿಂತ ಕಡಿಮೆ ಆದಲ್ಲಿ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರ ಪ್ರಾಚಾರ್ಯರವರಿಗೆ ಇರುತ್ತದೆ.

3) ಎರಡು ವರ್ಷದ ಗುತ್ತಿಗೆಗೂ ಒಟ್ಟು ಮೊತ್ತವನ್ನು ಟೆಂಡರ್ ತೆರೆದ 3 ದಿನಗಳಲ್ಲಿ ಕಟ್ಟಬೇಕು. ಇಲ್ಲದಿದ್ದಲ್ಲಿ ಟೆಂಡರ್ ರದ್ದಾಗುತ್ತದೆ. ಅದನ್ನು ಪ್ರಾಚಾರ್ಯರು ಸೂಕ್ತ ರೀತಿ ಮುಂದಿನ ಕ್ರಮ ಕೈಗೊಳ್ಳುವರು. ಹಾಗೂ ಪ್ರಾರಂಭಿಕ ಠೇವಣಿ ಮುಟ್ಟುಗೋಲು ಹಾಕಲಾಗುವುದು.
4) ವಿಜೇತ ಟೆಂಡರ್‌ದಾರರು ಅವಧಿ ಆದೇಶ ನೀಡಿದ ದಿನಾಂಕದಿಂದ 2 ವರ್ಷ ಚಾಲ್ತಿಯಲ್ಲಿರುತ್ತದೆ. ಈ ಅವಧಿಯಲ್ಲಿ ಎಳನೀರು ಕೀಳಲು ಅವಕಾಶವಿಲ್ಲ. ತೆಂಗಿನ ಗಿಡಗಳಿಗೆ ಉತ್ತಮ ಫಸಲು ನೀಡಲು ಗೊಬ್ಬರ, ಪಾತಿ ಮಾಡುವುದು, ನೀರು ಹಾಕುವುದು ಅವರದೇ ಜವಾಬ್ದಾರಿಯಾಗಿರುತ್ತದೆ.
5) ತೆಂಗಿನ ಗಿಡಗಳ ಕಾಯಿ ಕೀಳದಂತೆ ನೋಡಿಕೊಳ್ಳುವ ಉಸ್ತುವಾರಿ ಯಶಸ್ವಿ ಹರಾಜುದಾರರದ್ದೇ ಆಗಿರುತ್ತದೆ.
6) ತೆಂಗಿನ ಗಿಡಗಳಿಗೆ ನೀರು, ಗೊಬ್ಬರ ಮತ್ತು ಇತ್ಯಾದಿ ಕಾಲ ಕಾಲಕ್ಕೆ ಹಾಕತಕ್ಕದ್ದು.
7) ಯಾವುದೇ ವಿವಾದಾತ್ಮಕ ಅಂಶಗಳಿಗೆ ಪ್ರಾಚಾರ್ಯರ ತೀರ್ಮಾನವೇ ಅಂತಿಮ.

ಪ್ರಾಚಾರ್ಯರು
ಪಿ.ಆರ್. 307 ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ–577 301

ತಾಂತ್ರಿಕ ಶಿಕ್ಷಣ ಇಲಾಖೆ
ಪ್ರಾಚಾರ್ಯರವರ ಕಾರ್ಯಾಲಯ, ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ
ಟೆಂಡರ್ ಪ್ರಕಟಣೆ
ನಂ:ವಿಸಪಾಭ/35/ರಿ/ಕ್ಯಾಂಟೀನ್/2001–02, ದಿನಾಂಕ: 30ನೇ ಏಪ್ರಿಲ್ 2010

ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿಯ ಆಡಳಿತ ಕಟ್ಟಡದ ಮುಂಭಾಗದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಕ್ಯಾಂಟೀನ್ (12 x 15) ಕಟ್ಟಡವನ್ನು 02 ವರ್ಷದ ಅವಧಿಗೆ ಅತೀ ಹೆಚ್ಚು ಬಾಡಿಗೆ ಆಧಾರದ ಕ್ಯಾಂಟೀನ್ ನಡೆಸಲು ಬಯಸುವವರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರುದಾರರು ದಿನಾಂಕ: 16.06.10 ಅಪರಾಹ್ನ 3.00 ಗಂಟೆಯ ಒಳಗೆ ತಿಂಗಳ ಬಾಡಿಗೆ ಅಂತೆ ಹಾಗೂ ಅಕ್ಷರಗಳಲ್ಲಿ ನಮೂದಿಸಿ ಸಹಿಯೊಂದಿಗೆ ಪ್ರಾಚಾರ್ಯರು, ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ ಇವರಿಗೆ ಸಲ್ಲಿಸತಕ್ಕದ್ದು.

ಪ್ರಾಚಾರ್ಯರು
ಪಿ.ಆರ್. 308 ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ–577 301

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ
ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ
No.EE/MID/BGM/AE/TND/2010-11/1384, Dated: 27th April 2010

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:1124 ದಿನಾಂಕ:30/03/2010ರಲ್ಲಿ **"ಇ ಪ್ರೊಕ್ಯುರ್‌ಮೆಂಟ್"** ನಲ್ಲಿ ಆಹ್ವಾನಿಸಲಾದ ಈ ಕೆಳಗಿನ ಕಾಮಗಾರಿಯ ದಿನಾಂಕಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ.

ಕ್ರ. ಸಂ.	ಕೆಲಸದ ಹೆಸರು
	Standard Tender Document KW-4 ರಂತೆ
1.	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡವಾಡ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ

ವ್ಹಿ.ಬಿ. ಕುಲಕರ್ಣಿ
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ

WATER RESOURCES DEPARTMENT (MINOR IRRIGATION)
Office of the Executive Engineer, M.I. Division, Belgaum
No. EE /MID/BGM/TND/AE/2010-11/1384, Dated: 27th April 2010
SHORT-TERM TENDER TIME EXTENTION NOTIFICATION

The tender Invited by this office for the below mentioned work in E-Procurement Portal System vide Short Term Tender Notification No:1124 Dtd:30/03/2010, the dates of Tender are extended until further orders.

Sl. No.	Name of Work
	(Standard Tender Document KW-4)
1	Construction of LIS near Bendawad Village in Raibag Tq. Belgaum Dist.

V.B. KULKARNI

P.R. 309

Executive Engineer,

M.I. Division, Belgaum

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ

No.EE/MID/BGM/AE/TND/2010-11/1386, Dated: 29th April 2010

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:1244 ದಿನಾಂಕ:12/04/2010ರಲ್ಲಿ **"ಇ ಪ್ರೊಕ್ಯುರ್‌ಮೆಂಟ್"** ನಲ್ಲಿ ಆಹ್ವಾನಿಸಲಾದ ಈ ಕೆಳಗಿನ ಕಾಮಗಾರಿಯ ದಿನಾಂಕಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ.

ಕ್ರ. ಸಂ.	ಕೆಲಸದ ಹೆಸರು
	Standard Tender Document KW-1 & 2 ರಂತೆ
1.	ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ
2.	ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 310

ಕಾರ್ಯನಿರ್ವಾಹಕ ಇಂಜಿನೀಯರರು,

ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ

No.EE/MID/BGM/AE/TND/2010-11/1387, Dated: 29th April 2010

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:1245 ದಿನಾಂಕ:12/04/2010ರಲ್ಲಿ **"ಇ ಪ್ರೊಕ್ಯುರ್‌ಮೆಂಟ್"** ನಲ್ಲಿ ಆಹ್ವಾನಿಸಲಾದ ಈ ಕೆಳಗಿನ ಕಾಮಗಾರಿಯ ದಿನಾಂಕಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ.

ಕ್ರ. ಸಂ.	ಕೆಲಸದ ಹೆಸರು
	Standard Tender Document KW-2 ರಂತೆ
1.	ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಆನಗೋಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ
2.	ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಖಾದರವಾಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ
3.	ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಮಜಗಾಂವ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 311

ಕಾರ್ಯನಿರ್ವಾಹಕ ಇಂಜಿನೀಯರರು,

ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಕಾರ್ಮಿಕ ಇಲಾಖೆ

ಅಧಿಸೂಚನೆ

ಸಂಖ್ಯೆ.ಕಾಇ 450 ಎಲ್‌ಎಸ್‌ಐ 2009, ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2010

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಖಾಲಿಯಿರುವ ವಿಮಾ ವೈದ್ಯಾಧಿಕಾರಿಗಳ ಹುದ್ದೆಗೆ ಈ ಕೆಳಕಂಡ ಅಭ್ಯರ್ಥಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಲಾದ ಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ.

ಕ್ರ. ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
	ಗುಲ್ಬರ್ಗಾ ವಲಯ	
1.	ಡಾ:ಜಹುರುನ್ನೀಸಾದೇಬಾ ಬಿನ್ ಮೊಹಮದ್ ಹಮೀದ್ ಹುಸೇನ್ ನಂ.10–512/5, ಅಭೀದ್‌ವಿಲ್ಲಾ, ಗೋವಾ ಹೋಟೆಲ್ ಮೇಲೆ ಬ್ರಹಾಂಪುರ. ಗುಲ್ಬರ್ಗಾ–585103.	ಕಾ.ರಾ.ವಿ. ಚಿಕಿತ್ಸಾಲಯ, ವಾಡಿ.
2.	ಡಾ:ಉಪಲಾವಂಕರ್ ವಿನೋದ್, ಬಿನ್ ಶಿವಶರಣಪ್ಪ, ಮನೆ ನಂ.2–415, ಜಗತ್, ಗುಲ್ಬರ್ಗಾ–585102.	ಕಾರಾವಿ ಚಿಕಿತ್ಸಾಲಯ, ಸೇಡಂ.
3.	ಡಾ:ಹುಮೇರಾ ಫಾತಿಮಾ, ಬಿನ್ ಅಬ್ದುಲ್ ರಹೀಮ್, ಮನೆ ನಂ.5–341, ಬಡಾ ರೋಜಾ, ಗುಲ್ಬರ್ಗಾ–585104.	ಕಾರಾವಿ ಚಿಕಿತ್ಸಾಲಯ, ವಾಡಿ.
	ಬೆಂಗಳೂರು ಮತ್ತು ತುಮಕೂರು ವಲಯ	
1.	ಡಾ:ಶೈಲಜಾ ಡಿ.ಕೆ. ಬಿನ್ ದೊಡ್ಡವೀರಯ್ಯ, ನಂ.4,173/2, 2ನೇ ಮುಖ್ಯ ರಸ್ತೆ, ಗಣಪತಿ ದೇವಸ್ಥಾನದ ಹತ್ತಿರ, ಭೋವಿಪಾಳ್ಯ, ಮಹಾಲಕ್ಷ್ಮಿಪುರಂ, ಬೆಂಗಳೂರು–86.	ಕಾರಾವಿ ಚಿಕಿತ್ಸಾಲಯ, ದಾಸರಹಳ್ಳಿ.
2.	ಡಾ:ರಮ್ಯ ಕೆ. ಬಿನ್ ಕಂಬಯ್ಯ ನಂ.1242, 8ನೇ ಅಡ್ಡ ರಸ್ತೆ, ಚಂದ್ರ ಲೇ ಔಟ್, ಬೆಂಗಳೂರು–560 040.	ಕಾರಾವಿ ಚಿಕಿತ್ಸಾಲಯ, ಮೈಸೂರು ರಸ್ತೆ.
3.	ಡಾ:ನಾಗರಾಜ್ ಜೆ.ಸಿ. ಬಿನ್ ಸಿ.ಪಿ.ಜಯದೇವಕುಮಾರ್, ನಂ.725, 62ನೇ ಅಡ್ಡ ರಸ್ತೆ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.	ಕಾರಾವಿ ಚಿಕಿತ್ಸಾಲಯ, ದಾಸರಹಳ್ಳಿ.
4.	ಡಾ:ಮಧು ಎನ್. ಬಿನ್ ದಿವಂಗತ ಡಾ:ನಾಗರಾಜ ಎಂ. ನಂ.61–ಬಿ.ಎಸ್.ಎಫ್.ಎಸ್.208, ಯಲಹಂಕ, ಹೊಸನಗರ, ಬೆಂಗಳೂರು–560064.	ಕಾರಾವಿ ಚಿಕಿತ್ಸಾಲಯ, ಯಲಹಂಕ.
5.	ಡಾ:ಮಹೇಶ್ ಎನ್. ಬಿನ್ ದಿವಂಗತ ಡಾ:ನಾಗರಾಜ ಎಂ. ನಂ.61–ಬಿ.ಎಸ್.ಎಫ್.ಎಸ್.208, ಯಲಹಂಕ, ಹೊಸನಗರ, ಬೆಂಗಳೂರು–560064.	ಕಾರಾವಿ ಚಿಕಿತ್ಸಾಲಯ, ದೊಡ್ಡಬಳ್ಳಾಪುರ.
6.	ಡಾ:ಲತಾ ಎಂ. ಬಿನ್ ಮುನಿವೆಂಕಟಪ್ಪ ಹೆಚ್. ಕೇರಾಫ್ ರಾಜಣ್ಣ ಎಲ್. 112, ಹೆಚ್.ಎಂ.ದೊಡ್ಡಿ, ಎಂ.ಜಿ.ರಸ್ತೆ, ರೆಡ್ಡಿ ರಸ್ತೆ, ಕನಕಪುರ ತಾಲೋಕು, ರಾಮನಗರ–562117	ಕಾರಾವಿ ಚಿಕಿತ್ಸಾಲಯ, ಕೋಣನಕುಂಟೆ.

ಕ್ರ. ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
7.	ಡಾ:ದಿವ್ಯ ಸಿ. ಬಿನ್ ಚನ್ನೇಗೌಡ, ಕೆ.ಬಿ. ನಂ.19/3, ಕಲ್ಪವೃಕ್ಷ, ಶ್ರೀ ಸಿದ್ಧರಾಮೇಶ್ವರ ಗಿರಿ, ಬ್ಯಾಟರಾಯನಪುರ ಎ ಅಡ್ಡ ರಸ್ತೆ, ಮೈಸೂರು ರಸ್ತೆ, ಬೆಂಗಳೂರು–560 026.	ಕಾರಾವಿ ಚಿಕಿತ್ಸಾಲಯ, ಬಸವನಗುಡಿ.
8.	ಡಾ:ಪವಿತ್ರ ಬಿ.ಆರ್. ಬಿನ್ ದಿವಂಗತ ಎಂ.ಸುನಂದರಾಜೇ ಅರಸ್, ನಂ.168, 1ನೇ ಮುಖ್ಯ ರಸ್ತೆ, 7ನೇ ಬಿ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, 4ನೇ ಘಟ್ಟ, ಜೆ.ಪಿ.ನಗರ, ಬೆಂಗಳೂರು–560078.	ಕಾರಾವಿ ಚಿಕಿತ್ಸಾಲಯ, ಕೋಣನಕುಂಟೆ.
9.	ಡಾ:ಕಾರ್ತಿಕ್ ಬಿ.ಆರ್. ಬಿನ್ ರಂಗರಾಮ್, ನಂ.60, ಮಂಜುಶ್ರೀ ನಿಲಯ, ಡಿ ಗ್ರೂಪ್ ಲೇ ಔಟ್, ಶ್ರೀಗಂಧದ ಕಾವಲ್, ಸುಂಕದಕಟ್ಟೆ, ಬೆಂಗಳೂರು–560 091.	ಕಾ.ರಾ.ವಿ. ಚಿಕಿತ್ಸಾಲಯ, ಪೀಣ್ಯ

ಈ ನೇಮಕಾತಿಯ ಷರತ್ತುಗಳು ಈ ಕೆಳಗಿನಂತಿವೆ:

1) ಈ ನೇಮಕಾತಿಯು ಒಂದು ವರ್ಷದ ಅವಧಿಗೆ ಅಥವಾ ನೇರ ನೇಮಕಾತಿಯ ಮೂಲಕ ಹುದ್ದೆಯನ್ನು ತುಂಬುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ.
2) ಈ ನೇಮಕಾತಿ ಅಧಿಸೂಚನೆಯನ್ನು ನೋಂದಾಯಿತ ಅಂಚೆ ಮೂಲಕ ಜಾರಿಗೊಳಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು, ಈ ಅವಧಿಯ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಲಿಖಿತ ಮೂಲಕ ಸಕಾರಣವನ್ನು ನೀಡಿದಲ್ಲಿ ಮಾತ್ರ ಇನ್ನೂ 15 ದಿನಗಳ ಕಾಲಾವಕಾಶವನ್ನು ನೀಡುವುದಕ್ಕೆ ಪರಿಗಣಿಸಲಾಗುವುದು.
3) ಈ ಮೇಲಿನ ಅಭ್ಯರ್ಥಿಗಳು ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ರವರ ಮುಂದೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ತದನಂತರ ನಿರ್ದೇಶಕರಿಂದ ಚಲನಾದೇಶವನ್ನು ಪಡೆದು ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.
4) ಆಯ್ಕೆ ಪಟ್ಟಿಯಲ್ಲಿನ ವಿಮಾ ವೈದ್ಯಾಧಿಕಾರಿ ಅಭ್ಯರ್ಥಿಗಳಲ್ಲಿ ತಜ್ಞ ವೈದ್ಯರುಗಳಿಗೆ ಮಾಸಿಕ ರೂ.13,000–00 ಹಾಗೂ ಉಳಿದ ವೈದ್ಯರುಗಳಿಗೆ ರೂ.11,000–00ಗಳ ಸಂಚಿತ ವೇತನವನ್ನು ಪಾವತಿಸಲಾಗುವುದು.
5) ಖಾಯಂ ವೈದ್ಯರಿಲ್ಲದ ಚಿಕಿತ್ಸಾಲಯಗಳ ಹಣಕಾಸಿನ ವ್ಯವಹಾರವನ್ನು ಗುತ್ತಿಗೆ ವೈದ್ಯರಿಗೆ ನೀಡುವ ಬದಲು ಹತ್ತಿರದ ಕಾ.ರಾ.ವಿ. ಆಸ್ಪತ್ರೆ/ಚಿಕಿತ್ಸಾಲಯಗಳ ಡ್ರಾಯಿಂಗ್ ಆಫೀಸರ್‌ಗಳಿಗೆ ನೀಡಿ ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿದ ವೈದ್ಯರುಗಳ ಚಿಕಿತ್ಸಾಲಯಗಳಿಗೆ ಸಂಬಂಧಿಸಿದ ಹಣ ಡ್ರಾ ಮಾಡಲು ಅಧಿಕಾರ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಪಿ.ಆರ್. 303

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ. (ಕಾರಾವಿ ಯೋ (ವೈ) ಸೇವೆಗಳು)

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸಣ್ಣ ನೀರಾವರಿ ವಿಭಾಗ, ಗುಲ್ಬರ್ಗಾ

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಐಎಫ್‌ಟಿ ನಂ: ಇಇ/ಎಂಐಡಿ/ಗು/ಯೋಶಾ–1/ಕೆ.ಡಬ್ಲ್ಯೂ–4/2009–10/1361, ದಿನಾಂಕ: 23ನೇ ಏಪ್ರಿಲ್ 2010

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಗುಲಬರ್ಗಾ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ನಿರ್ವಹಿಸಿದ ಅನುಭವವುಳ್ಳ ಅರ್ಹ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಸಣ್ಣ ನೀರಾವರಿ ವಿಭಾಗ, ಗುಲಬರ್ಗಾ ಇವರು ಐಟಂವಾರು

ಟೆಂಡರನ್ನು (ದ್ವಿ ಲಕೋಟೆ ಪದ್ಧತಿ) ದ್ವಿ ಪ್ರತಿಯಲ್ಲಿ ಇ–ಟೆಂಡರ್ ಮುಖಾಂತರ ಕರೆಯಲಾಗಿದೆ. ಟೆಂಡರ್‌ದಲ್ಲಿ ಭಾಗವಹಿಸುವ ಗುತ್ತಿಗೆದಾರರ ಕನಿಷ್ಠ ಅರ್ಹತೆಗಳನ್ನು ಗುತ್ತಿಗೆದಾರ ಸೂಚನೆಗಳ ನಿಬಂಧನೆ 3 ರಂತೆ ಪರಿಗಣಿಸಿ ಗುತ್ತಿಗೆ ನೀಡಲಾಗುವುದು. ಟೆಂಡರ್ ದಾಖಲೆಯನ್ನು ಕರ್ನಾಟಕ ಸರಕಾರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದಾಗಿದೆ.

ಟೆಂಡರುಗಳಿಗೆ ಕೆಳಗೆ ದಾಖಲಿಸಿರುವ ಮುಂಗಡ ಠೇವಣಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೂ ಒಂದು ರೂಪದಲ್ಲಿ 45 ದಿವಸಗಳ ಅವಧಿಗೆ ಮಾನ್ಯತೆ ಇರುವಂತೆ ದಾಖಲಿಸಿ ಸಲ್ಲಿಸುವುದು. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೊರ್ಟಲ್ ಆನ್‌ಲೈನ್‌ದಲ್ಲಿ ದಿನಾಂಕ: 14.06.2010 ರಂದು ಮಧ್ಯಾಹ್ನ 16–00 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೊರ್ಟಲ್ ನಿಯಮದ ಪ್ರಕಾರ ತೆಗೆಯಲಾಗುವುದು. ನಿಬಂಧನೆ ಷರತ್ತುಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರಕಾರ ಇ–ಪ್ರೊಕ್ಯೂರ್‌ಮೆಂಟದಲ್ಲಿ ಪಡೆಯಬಹುದು.

ಟೆಂಡರ್ ಪ್ರಕ್ರಿಯೆ ದಿನಾಂಕಗಳು:

1) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ 10–06–2010 ಸಮಯ 17–30ರ ವರೆಗೆ
2) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ 14–06–2010 ಸಮಯ 16–00ರ ವರೆಗೆ
3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ 17–06–2010 ಸಮಯ 11–00ರ ವರೆಗೆ
4) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 19–06–2010 ಸಮಯ 11–00ರ ವರೆಗೆ

ಕ್ರ. ಸಂ.	ಕಾಮಗಾರಿ ಹೆಸರು	ಫಾರಂ ನಂಬರ್	ಟೆಂಡರಿಗಾಗಿ ಇಟ್ಟಿರುವ ಅಂದಾಜು ಮೊತ್ತ ರೂ. ಗಳಲ್ಲಿ	ಮುಂಗಡ ಠೇವಣಿ ಮೊತ್ತ ರೂ. ಗಳಲ್ಲಿ	ಟೆಂಡರ್ ಪ್ರೊಸೆಸಿಂಗ್ ಶುಲ್ಕ ರೂ. ಗಳಲ್ಲಿ	ಕಾಮಗಾರಿಯನ್ನು ಮುಗಿಸಲು ಕಾಲಾವಧಿ ಮಳೆಗಾಲ ಸೇರಿ
ಲೆಕ್ಕ ಶೀರ್ಷಿಕೆ 4702–00–101–5–01–139 ಅಣೆಕಟ್ಟು (ಎ.ಐ.ಬಿ.ಪಿ.)						
1	ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ದುಗನೂರ ಗ್ರಾಮದ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿ	ಕೆ.ಡಬ್ಲ್ಯೂ–4	15291570.00	229374.00 ಇ–ಪ್ರೊಕ್ಯೂರ ಮೆಂಟ್ ಪ್ರಕಾರ	ಇ–ಪೋರ್ಟಲ್ ನಿಯಮದ ಪ್ರಕಾರ	9 (ಒಂಬತ್ತು) ಕ್ಯಾಲೆಂಡರ್ ತಿಂಗಳುಗಳು

ಕಾಳಗಿ ಶಿವಪುತ್ರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಗುಲಬರ್ಗಾ

WATER RESOURCES DEPARTMENT (MINOR IRRIGATION)
OFFICE OF THE EXECUTIVE ENGINEER MINOR IRRIGATION DIVISION, GULBARGA
SHORT TERM TENDER NOTIFICATION
INVITATION FOR TENDERS (IFT-KW-4) TWO COVER SYSTEM
IFT No. EE/MID/GIB/PB-1/2010-11/1361, Dated: 23rd April 2010

The Executive Engineer, Minor Irrigation Department, Gulbarga Division, Gulbarga invites tender from the eligible tenderes for the works detailed in the table below, in Item Rate tender system, as per "Standard tender documents (KW-4)" The tenderers may submit tenders for any or all the works given in the table through e-procurement portal of the Government of Karnataka (https://www.eproc.karnataka.gov.in). The tenders are advised to note the minimum qualification criteria specified in the instructions to tenderers to qualify for the award of the contract and go through the general conditions for eligible tenderers and qualification criteria given in the E-portal.

CALENDER OF EVENTS:

1) Last Date & time for tender queries clarifications 10.06.2010 Upto 17.30 Hours
2) Last Date & Time for receipt of tenders 14.06.2010 Upto 16.00 Hours
3) Date & Time for Opening of Technical Bid 17.06.2010 Upto 11.00 Hours
4) Date & Time for opening of financial Bid 19.06.2010 Upto 11.00 Hours

Sl. No.	Name of the work	Approximate value of works (In Rs.)	Earnest Money Deposit (Rs)	Tender Processing Fee (Amount in Rs)	Period of completion (Including Monsoon Period)
	HEAD OF ACCOUNT: 4702-00-101-5-01-139 ANICUT (A.I.B.P.)				
1	CONSTRUCTION OF ANICUT NEAR DUGNOOR VILLAGE IN SEDAM TALUK, GULBARGA DISTRICT	15291570.00	229374.00 As per E-procurement	As per E-Portal Rules	9 (Nine) Calender Months

P.R. 315 Executive Engineer, M.I. Division, Gulbarga

ಕರ್ನಾಟಕ ಮೃಗಾಲಯ ಪ್ರಾಧಿಕಾರ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕ್, ಬೆಂಗಳೂರು – 83.

ದೂರವಾಣಿ: 7828540, 7828300, ಫ್ಯಾಕ್ಸ್: 7828400, E mail: bannerghattazoo@gmail.com

ಪ್ರಕಟಣೆ

ಸಂಖ್ಯೆ:ಎ2/ಬಬಪಾ/ಪ್ರವೇಶ ದರ/2010–11, ದಿನಾಂಕ: 9ನೇ ಏಪ್ರಿಲ್ 2010

ವಿಷಯ: ಬನ್ನೇರುಘಟ್ಟ ಜೈವಿಕ ಉದ್ಯಾನವನದ ಪರಿಷ್ಕತ ಪ್ರವೇಶ ದರ ಕುರಿತು

ಉಲ್ಲೇಖ: 1.ಕರ್ನಾಟಕ ಮೃಗಾಲಯ ಪ್ರಾಧಿಕಾರದ 112 ನೇ ಆಡಳಿತ ಮಂಡಳಿ ಸಭೆಯ ದಿ: 27–03–2010

2. ಉಪ ಸಮಿತಿ ಸಭೆ ದಿನಾಂಕ: 07–04–2010

ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕಿನ ಪ್ರಾಣಿಗಳ ಪೋಷಣೆ, ಅಹಾರ ನಿರ್ವಹಣೆ, ಸಫಾರಿ ವೀಕ್ಷಣೆಗೆ ಕರೆದೊಯ್ಯುವ ಪ್ರವಾಸೋದ್ಯಮ ಇಲಾಖೆಯ ವಾಹನಗಳ ಇಂಧನ ಮತ್ತು ಇತರೆ ನಿರ್ವಹಣೆ ವೆಚ್ಚಗಳು ಹಾಗೂ ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಪ್ರಾಣಿಪಾಲಕರ ವೇತನ ಮತ್ತು ಇತರೆ ಭತ್ಯೆಗಳಲ್ಲಿಯೂ ಪರಿಷ್ಕರಣೆಯಾಗಿರುವುದರಿಂದ ಪ್ರಸ್ತುತ ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕಿನಲ್ಲಿ ಪ್ರವೇಶ ಶುಲ್ಕದ ಮೂಲಕ ಪ್ರವಾಸಿಗರಿಂದ ಪಡೆಯುತ್ತಿರುವ ಪ್ರವೇಶ ಶುಲ್ಕದಿಂದ ಮೇಲೆ ತಿಳಿಸಿರುವ ನಿರ್ವಹಣೆ ಕೆಲಸಗಳನ್ನು ನಿರ್ವಹಿಸುವುದು ತುಂಬಾ ಕಷ್ಟಕರವಾಗಿದೆ. ಈ ಹಿಂದೆ 2007 ರಲ್ಲಿ ದರವು ಪರಿಷ್ಕರಿಸಲಾಗಿತ್ತು, ಅಲ್ಲದೇ 2009 ರಲ್ಲೇ ದರವನ್ನು ಪರಿಷ್ಕರಿಸಬೇಕಾಗಿತ್ತು. ಅದರಂತೆ ದಿನಾಂಕ: 27–03–2010 ರಂದು ನಡೆದ 112ನೇ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ದಿನಾಂಕ: 07–04–2010 ರಂದು, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ, ಕೆ.ಎಸ್.ಟಿ.ಡಿ.ಸಿ ನಿಗಮದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಮೃಗಾಲಯ ಪ್ರಾಧಿಕಾರ ಹಾಗೂ ಈ ಕೆಳ ಸಹಿದಾರರ ಹಾಜರಾತಿಯಲ್ಲಿ ನಡೆದ ಉಪ ಸಮಿತಿ ಸಭೆಯಲ್ಲಿ ಮೇಲೆ ತಿಳಿಸಿರುವ ವಿಷಯದಲ್ಲಿ ತೆಗೆದುಕೊಂಡ ಸಭೆಯ ನಿರ್ಣಯದಂತೆ, ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕಿನ ಮೃಗಾಲಯ ಮತ್ತು ಸಫಾರಿ ವೀಕ್ಷಣೆ ಪ್ರವೇಶ ಶುಲ್ಕವನ್ನು ಅನಿವಾರ್ಯವಾಗಿ ಈ ಕೆಳಕಂಡಂತೆ ಹೆಚ್ಚಿಸಲು ನಿರ್ದರಿಸಲಾಗಿದೆ. ಈ ಹಿಂದೆ ವಾರದ ದಿನ ಮತ್ತು ರಜಾದಿನ ಪ್ರವೇಶ ಶುಲ್ಕ ಬೇರೆ ಬೇರೆ ಇದ್ದು, ಪ್ರಸ್ತುತ ಎಲ್ಲ ದಿನವೂ ಒಂದೆ ದರವಿರುತ್ತದೆ. ಆದ್ದರಿಂದ ದಿನಾಂಕ: 15–04–2010 ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

ಪ್ರವೇಶ ಶುಲ್ಕದ ವಿವರ	ಪರಿಷ್ಕರಿತ ಪ್ರವೇಶ ಶುಲ್ಕದ ವಿವರ	ಮಕ್ಕಳು	ಹಿರಿಯ ನಾಗರೀಕರು	ಇತರೆ
ಮೃಗಾಲಯ ವೀಕ್ಷಣೆ	45	25	30	
ಚಿಟ್ಟೆ ಉದ್ಯಾನ	25	15	–	
ಗ್ರ್ಯಾಂಡ್ ಸಫಾರಿ (ಹುಲಿ, ಸಿಂಹ, ಕರಡಿ, ಸಸ್ಯಾಹಾರಿ ಪ್ರಾಣಿಗಳ ವೀಕ್ಷಣೆ ವಾಹನಗಳ ಮುಖಾಂತರ)	115	60	70	
ಆನೆ ಸವಾರಿ	60	30	45	
ಟ್ರಕ್ಕಿಂಗ್ (1:30 ರಿಂದ 2 ಗಂಟೆ ಅವಧಿಯ ಕಾಡಿನಲ್ಲಿ ನಡಿಗೆ)	70	30	55	
ಟ್ರಕ್ಕಿಂಗ್ (1 ಗಂಟೆ ಅವಧಿಯ ಕಾಡಿನಲ್ಲಿ ನಡಿಗೆ)	45	20	30	
ಇತರೆ				
ಅ. ಕ್ಯಾಮರ			–	25
ಆ. ವಿಡಿಯೋ ಕ್ಯಾಮರ				200

ಸೂಚನೆ:

1. ಗ್ರಾಂಡ್ ಸಫಾರಿಗೆ ಹೋಗುವವರು ಕಡ್ಡಾಯವಾಗಿ ಮೃಗಾಲಯ ವೀಕ್ಷಣೆ ಟಿಕೇಟ್ ಪಡೆಯಬೇಕು
2. ಮಕ್ಕಳು 5 ವರ್ಷದಿಂದ 12 ವರ್ಷಗಳವರೆಗೆ ಮಾತ್ರ
3. 5 ವರ್ಷಕ್ಕಿಂತ ಚಿಕ್ಕ ಮಕ್ಕಳಿಗೆ ಉಚಿತ ಪ್ರವೇಶ
4. ಹಿರಿಯ ನಾಗರಿಕರು – 60 ವರ್ಷ ಮೇಲ್ಪಟ್ಟವರು (ವಯಸ್ಸಿನ ದಾಖಲೆ ಹಾಜರು ಪಡಿಸತಕ್ಕದ್ದು)

5. ವಿದ್ಯಾರ್ಥಿಗಳ ಗುಂಪಿಗೆ ವಯಸ್ಕರ ದರದ 50% ರಿಯಾಯಿತಿ ನೀಡಲಾಗುವುದು
6. ಪ್ರಾಣಿಗಳ ವೀಕ್ಷಣೆಗೆ ಅರಣ್ಯದಲ್ಲಿ ನಿಸರ್ಗ ನಡಿಗೆಗೆ ಕನಿಷ್ಟ 10 ಜನ ಇರತಕ್ಕದ್ದು
7. ಅಂಗವಿಕಲ, ಬುದ್ದಿಮಾಂದ್ಯರಿಗೆ, ಕಾರ್ಯನಿರ್ವಾಹಕ ನಿರ್ದೇಶಕರ ಆದೇಶದ ಮೇರೆಗೆ ರಿಯಾಯತಿ ನೀಡಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು,
ಬನ್ನೇರುಘಟ್ಟ ಬಯಲಾಜಿಕಲ್ ಪಾರ್ಕ್, ಬೆಂಗಳೂರು – 83.

ZOO AUTHORITY OF KARNATAKA

OFFICE OF THE EXECUTIVE DIRECTOR, BANNERGHATTA BIOLOGICAL PARK, BANGALORE

Ph No: 7828540, 7828300 Fax: 7828400 E mail: bannerghattazoo@gmail.com

NOTIFICATION

No.A2/BBP/Entry Fee/2010-11, Dated: 9th April 2010

Sub: Revision of Entry Fee of Banerghatta Biological Park, Bangalore- reg

Ref: 1. Proceedings of 112th Governing Council Meeting held on 27-03-2010

2. Proceedings of Sub Committee Meeting held on 07-04-2010

It is hereby informed to the general public/visitors to the Bannerghatta Biological Park that owing to increasein the cost of animal maintenance, animal feeds, diesel cost and other establishment costs revision of entry fee has become inevitable. The revision of entry fee and other charges was last done in the year 2007 and it was due for revision in April, 2009 itself. To cope with the high mounting maintenance cost, the Governing Council, Zoo Authority of Karnataka in its 112th meeting held on 27th March, 2010 has resolved to revise the entry fee and other charges, along with the harmonization and rationalization of tariff structure, which was also ratified in the meeting held between the Sub-Committee of Zoo Authority of Karnataka (ZAK) and Karnataka State Tourism Development Corporation Ltd. (KSTDC), held on 7th April, 2010 as follow:

Sl. No	Description	Entry Fee Rate w.e.f. 15-04-2010			Others
		Adults	Children	Senior Citizen	
1	Zoo	45	25	30	
2	Butterfly Park	25	15	-	
3	Grand Safari (Tiger , Lion, Bear & Herbivore safari)	115	60	70	
4	Elephant Joy Ride	60	30	45	
5	Long trek/Natural walk through natural forest of bio-park & view bison, chital, sambar, black buck, crocodile etc., (1 ½ to 2 hours)	70	30	55	
6	Short trek Nature walk through natural forest of bio-park & view bison, chital, sambar, black buck, crocodile etc., (1 hour)	45	20	30	
7	Others				
	a)Still Camera				25
	b)Video Camera				200

The above revised rates shall be effective from 15th April, 2010.

Note:

1. Zoo entry tickets compulsory for the Grand Safari trips.
2. Children those of age band above 5 years and upto 12 years
3. Children of 5 years and below free entry
4. Senior Citizen- Persons above 60 years of age (Age proof to be produced)
5. Student group (including accompanying teachers) – 50% discount of the adults rates
6. Trekking/Natural Walk – Aminimum of 10 members require
7. Physically/mentally challenged persons may be offered concession waiver at the discretion of the Executive Director, Bannerghatta Biological Park

Executive Director

P.D. 66 Bannerghatta Biological Park, Bangalore

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ ಮೈಸೂರು – 570006
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಸಂಖ್ಯೆ : ಕರಾಮುವಿ/ಸಿಪಾವಿ/02–1253/2010–11, ದಿನಾಂಕ: 5ನೇ ಮೇ 2010

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ **"2010–11 ನೇ ಶೈಕ್ಷಣಿಕ ಸಾಲಿಗೆ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು"** ಮುದ್ರಿಸಿ ಸರಬರಾಜುಮಾಡಲು ಕನಿಷ್ಠ ಐದು ವರ್ಷ ಮುದ್ರಣದ ಅನುಭವವಿರುವ ವಿವಿಧ ಅಳತೆಯ ಆಫ್‌ಸೆಟ್ / ವೆಬ್ ಆಫ್‌ಸೆಟ್ ಮುದ್ರಣಯಂತ್ರ ಹೊಂದಿರುವ ಖಾಸಗಿ, ಸರ್ಕಾರದ ಅಧೀನಕ್ಕೊಳಪಟ್ಟ ಮುದ್ರಣಾಲಯದಿಂದ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999** ಮತ್ತು **ನಿಯಮಗಳು 2000** ಹಾಗು ಸರ್ಕಾರದ ಆದೇಶ, ಸುತ್ತೋಲೆಗಳಿಗೆ ಬದ್ಧರಾಗಿ **"ಎರಡು ಲಕೋಟೆ ಪದ್ಧತಿ"**ಯಲ್ಲಿ ದರಪಟ್ಟಿ ಕರೆಯಲಾಗಿದೆ. ಮುದ್ರಣದ ಅಂದಾಜು ವೆಚ್ಚ 6 ಕೋಟಿ ರೂ. ಗಳು.

ಮುದ್ರಕರು ಟೆಂಡರ್ ಫಾರಂಅನ್ನು ಪಡೆಯಲು ರೂ. 1,000/– (ಮಾರಾಟ ತೆರಿಗೆ ಸೇರಿದಂತೆ) ಗಳ ಡಿ.ಡಿ. ಯನ್ನು **"ಹಣಕಾಸು ಅಧಿಕಾರಿಗಳು, ಕರಾಮುವಿ"**, ಇವರ ಹೆಸರಿನಲ್ಲಿ ಪಡೆದು ಅಂಚೆ ಮೂಲಕ ಅಥವಾ ಖುದ್ದಾಗಿ ವಿ.ವಿ. ನಿಲಯದ ಕೇಂದ್ರಸ್ಥಾನದಲ್ಲಿ ಕಛೇರಿ ಸಮಯದಲ್ಲಿ **ಉಪಕುಲಸಚಿವ (ಸಿದ್ಧಪಾಠ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–06,** ಇವರಿಗೆ ಸದರಿ ಡಿ.ಡಿ. ಯನ್ನು ನೀಡಿ, ದರಪಟ್ಟಿ ಸಂಬಂಧದ ಸಂಪೂರ್ಣ ವಿವರ ಮತ್ತು ಷರತ್ತುಗಳನ್ನೊಳಗೊಂಡ ಅರ್ಜಿಗಳನ್ನು ಪಡೆಯುವುದು. ಈ ರೀತಿ ಪಡೆದ ಟೆಂಡರ್ ಫಾರಂ ಅನ್ನು ಕೂಲಂಕಷವಾಗಿ ಓದಿ ತಿಳಿದು ಟೆಂಡರ್ ಫಾರಂನ ಷರತ್ತು, ಸ್ಪೆಷಿಫಿಕೇಷನ್‌ಗಳಿಗೆ ಬದ್ಧರಾಗಿ ದರಪಟ್ಟಿ ಸಲ್ಲಿಸತಕ್ಕದ್ದು. ವಿಶ್ವವಿದ್ಯಾನಿಲಯದೊಂದಿಗೆ ದಾವೆ ಹೂಡಿದ್ದ ಅಥವಾ ಯಾವುದೇ ಸಂಸ್ಥೆಗಳಲ್ಲಿ ಕಪ್ಪುಪಟ್ಟಿಗೆ ಸೇರಿರುವ / ಇ.ಎಂ.ಡಿ. ಮುಟ್ಟುಗೋಲು ಹಾಕಿಕೊಂಡಿರುವ ಮುದ್ರಣಾಲಯಗಳ ದರಪಟ್ಟಿಯನ್ನು ತಿರಸ್ಕರಿಸಲಾಗುತ್ತದೆ. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೂ ಅವಕಾಶವಿರುವುದಿಲ್ಲ.

1) **"ಹಣಕಾಸು ಅಧಿಕಾರಿಗಳು", ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–06,** ಅವರ ಹೆಸರಿನಲ್ಲಿ **ರೂ. 6,00,000/– (ರೂಪಾಯಿ ಆರು ಲಕ್ಷ ಮಾತ್ರ)** ಗಳ ಡಿಮ್ಯಾಂಡ್ ಡ್ರಾಫ್ಟನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಭದ್ರತಾ ಠೇವಣಿಯಾಗಿ (EMD) ದರಪಟ್ಟಿಯೊಂದಿಗೆ ಲಗತ್ತಿಸತಕ್ಕದ್ದು. ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ನೀಡುವುದಿಲ್ಲ. ಟೆಂಡರ್ ನಿಯಮಗಳನ್ನು ಪೂರ್ಣವಾಗಿ ಪಾಲಿಸುವ ಷರತ್ತಿನ ಮೇಲೆ ಭದ್ರತಾ ಠೇವಣಿಯನ್ನು ಹಿಂದಿರುಗಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

2) **"2010–2011 ನೇ ಶೈಕ್ಷಣಿಕ ಸಾಲಿನ ವಿವಿಧ ಶಿಕ್ಷಣ ಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸುವ ಸಂಬಂಧದ ದರಪಟ್ಟಿ"** ಎಂದು ಮೇಲ್ಬರಹ ಹೊಂದಿದ ಮೊಹರಾದ ಲಕೋಟೆಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅಥವಾ ಖುದ್ದಾಗಿ **"ಕುಲಸಚಿವ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–06"** ಇವರ ಹೆಸರಿಗೆ ಕಳುಹಿಸತಕ್ಕದ್ದು. ಅಂಚೆಯಿಂದಾಗುವ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಜವಾಬ್ದಾರಿಯಲ್ಲ.

ಟೆಂಡರ್ ಫಾರಂ ಅನ್ನು ವಿ.ವಿ. ಯಿಂದ ವಿತರಿಸುವ ದಿನಾಂಕ	ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ	ಮೊಹರಾದ ಲಕೋಟೆಗಳನ್ನು ತೆರೆಯುವ ದಿನಾಂಕ
06–05–2010	14–06–2010	15–06–2010

3) ಮೇಲ್ಕಂಡ ದಿನಾಂಕಗಳಂದು ಒಂದು ವೇಳೆ ಸಾರ್ವತ್ರಿಕ ರಜೆ ಬಂದಲ್ಲಿ ನಂತರದ ದಿನವನ್ನು ಕಛೇರಿ ಕೆಲಸದ ದಿನವೆಂದು ಪರಿಗಣಿಸತಕ್ಕದ್ದು.

4) ಯಾವುದೇ ಅಥವಾ ಎಲ್ಲಾ ನಮೂದಿಸಿದ ದರಪಟ್ಟಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ಸ್ವೀಕರಿಸುವ, ರದ್ದುಪಡಿಸುವ, ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಹೊಂದಿರುತ್ತದೆ.

ಕುಲಸಚಿವ
